SL. No. : FF

ಒಟ್ಟು ಪ್ರಶ್ನೆಗಳ ಸಂಖ್ಯೆ : 58 ]

Total No. of Questions : 58 ]

**CCE PF**
**REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 62-K**

**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ / Private Fresh)**

ದಿನಾಂಕ : 04. 04. 2018 ] [ Date : 04. 04. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 58 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 16 × 1 = 16

1. ಶಿಶುನಾಳ ಶರೀಫರು ಸ್ವಪ್ರಯತ್ನದಿಂದ ಏನನ್ನು ಕಲಿತರು ?
2. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?
3. ರಾಮ್‌ಸಿಂಗನು ಸಿಪಾಯಿಗಳಿಗೆ ಯಾವ ಮಾತನ್ನು ಸೆರಗಿಗೆ ಗಂಟು ಹಾಕಿಕೊಳ್ಳುವಂತೆ ತಿಳಿಸಿದನು ?
4. ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಏನು ಮಾಡಿದನು ?
5. ಕೆಳದಿಯ ಚೆನ್ನಮ್ಮ ಯಾರಿಗೆ ಆಶ್ರಯವನ್ನು ನೀಡಿದಳು ?
6. 'ಸಂಧ್ಯಾರಾಗ' ಪುಸ್ತಕವನ್ನು ಬೀಚಿಯವರು ಏಕೆ ಓದಿದರು ?
7. ಬೀಚಿಯವರನ್ನು ಮಂತ್ರಮುಗ್ಧಗೊಳಿಸಿದ ಕೃತಿ ಯಾವುದು ?
8. ಸತೀಶ ಕುಲಕರ್ಣಿಯವರು ಕಟ್ಟಬಯಸಿದ ಮನುಕುಲವು ಮೆಚ್ಚುವಂಥದ್ದು ಏಕೆ ?
9. 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ಯಾರು ಯಾರು ಒಂದೇ ಎಂದು ಹೇಳಿದ್ದಾರೆ ?
10. ಭೀತ ವಿಸ್ಮಿತರಾದ ಕವಿ ಸಿ.ಪಿ.ಕೆ.ಯವರು ಯಾರ ಹಾಗೆ ತತ್ತರಿಸಿದರು ?
11. ಯಾವುದು ಸ್ವರ್ಗವೆಂದು ಬಸವಣ್ಣನವರು ಹೇಳಿದ್ದಾರೆ ?
12. ಪುರಂದರದಾಸರು ಯಾವುದನ್ನು ಉದರ ವೈರಾಗ್ಯವೆಂದಿದ್ದಾರೆ ?
13. ಆಚಾರವಂತ ಎನ್ನುವ ಹೆಸರಿಗೆ ಯಾರು ಅರ್ಹನಲ್ಲವೆಂದು ಕವಿ ಸೋಮನಾಥ ಹೇಳಿದ್ದಾರೆ ?
14. ಬೇರೆಯವರ ಸಾಲಕ್ಕೆ ಯಾವಾಗ ಹೊಣೆಯಾಗಬೇಕೆಂದು ಕವಿ ಸೋಮನಾಥ ಹೇಳಿದ್ದಾರೆ ?
15. ಧರ್ಮಪದನಿಗೆ ವಿಷವುಣಿಸಲು ಪ್ರಯತ್ನಿಸಿದ್ದೇಕೆ ?
16. ಧರ್ಮಪದನು ವಿಶುವಿನ ಬಳಿಗೆ ಬಂದದ್ದೇಕೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 14 × 2 = 28

17. ಗೊರೂರರನ್ನು ಮಿನಿ ಪೊಲೀಸ್ ನಗರದ ಪೊಲೀಸರು ಹೇಗೆ ಉಪಚರಿಸಿದರು ?
18. ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ ?
19. ಕೊಡಗಿನ ಗೌರಮ್ಮನವರು ಯಾವ ಯಾವ ವಿಚಾರಗಳ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದರು ?
20. ಶಿಶುನಾಳ ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡದ್ದು ಹೇಗೆ ?
21. ರಾಮ್‌ಸಿಂಗ್‌ನ ತಾಯಿ ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.
22. ಕಿತ್ತೂರು ರಾಣಿ ಚೆನ್ನಮ್ಮ ಸೆರೆಯಾದುದೇಕೆ ?

23. ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ ಏಕೆ ?

24. 'ಕಟ್ಟತೇವ ನಾವು' ಕವಿತೆಯು ಸಮಾಜದಲ್ಲಿನ ಕ್ರಾಂತಿಕಾರಿಗಳ ಕನಸಿನ ಹಾಡನ್ನು ಹೇಗೆ ಕಟ್ಟಲು ಬಯಸುತ್ತಿದೆ ?

25. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ಕವಿ ಕೆ.ಎಸ್. ನಿಸಾರ್ ಅಹಮದ್‌ರವರು ಹೇಗೆ ನಿರೂಪಿಸಿದ್ದಾರೆ ?

26. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ಕವಿ ಕವಿ ಕೆ.ಎಸ್. ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು ?

27. ಗ್ರಂಥಾಲಯವನ್ನು ಹೊಕ್ಕಾಗ ಕವಿ ಸಿ.ಪಿ.ಕೆ. ಅವರಿಗಾದ ಅನುಭವವನ್ನು ತಿಳಿಸಿ.

28. ರೈತನು ಮಳೆರಾಯನಲ್ಲಿ ದನಕರುಗಳು ಹೇಗಾಗಿವೆಯೆಂದು ನಿವೇದಿಸಿಕೊಂಡಿದ್ದಾನೆ ?

29. ಮೋಡಗಳನ್ನು ಕಂಡ ರೈತರ ಸಂಭ್ರಮವನ್ನು ಜನಪದರು ವರ್ಣಿಸಿರುವುದು ಮೆಚ್ಚುವಂಥದ್ದೇಕೆ ?

30. ಈರಪ್ಪ ಎಂ. ಕಂಬಳಿಯವರನ್ನು ಕಂಡ ಸಹ ಪ್ರಯಾಣಿಕರು ಪಕಪಕನೆ ನಗಲು ಕಾರಣವೇನು ?

**ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ :** $4 \times 3 = 12$

31. "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ."

32. "ದೊರಕಿದಾ ಗುರು ದೊರಕಿದಾ ಸದ್ಗುರು"

33. "ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟತೇವ"

34. "ನಾಟಕ ಸ್ತ್ರೀಯಂತೆ ಬಯಲ ಡಂಭವ ತೋರಿ"

35. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 3 = 3$

ಕಂಚುಗಾರನ ..........................................................

..........................................................................

..........................................................................

.............................................................. ಮಾಡುವುದು

*ಅಥವಾ*

ನಾನು ಎಂಬುದ ......................................................

..........................................................................

..........................................................................

.......................................................... ಕಾರ್ಯಗಳೆಲ್ಲವು

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

36. ಡಾ|| ವಿಜಯಲಕ್ಷ್ಮಿ ಬಾಳೇಕುಂದ್ರಿ

37. ಸಿ.ಪಿ.ಕೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

38. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ವಿವರಿಸಿ.

***ಅಥವಾ***

ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.

39. ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವುದು ಹೇಗೆಂದು ಬಸವಣ್ಣನವರು ತಿಳಿಸಿದ್ದಾರೆ ? ವಿವರಿಸಿ.

***ಅಥವಾ***

ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳನ್ನು ಕುರಿತು ವಿವರಿಸಿ.

## ವಿಭಾಗ – 'ಬಿ'

## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

40. ಇವುಗಳಲ್ಲಿ ಅನ್ವರ್ಥಕನಾಮ ಪದವಿದು

(ಎ) ಕಾಡು (ಬಿ) ಧಾರವಾಡ

(ಸಿ) ವಿದ್ವಾಂಸ (ಡಿ) ಅವರು

41. 'ಕುಲವೆನ್ನದ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಲೋಪ (ಬಿ) ವಕಾರಾಗಮ

(ಸಿ) ಯಕಾರಾಗಮ (ಡಿ) ಆದೇಶ

42. ಕೆಳಗಿನ ಪದಗಳಲ್ಲಿ ತದ್ಭವ ರೂಪವಿದು

(ಎ) ಕವಿ (ಬಿ) ಕಾವ್ಯ

(ಸಿ) ವರುಷ (ಡಿ) ಯೋಗಿ

43. 'ವಿದ್ಯಾರ್ಥಿಗಳು ಶಾಲೆಗೆ ಶಿಸ್ತಿನಿಂದ ಬರುತ್ತಿದ್ದಾರೆ.' ಎಂಬ ವಾಕ್ಯವು ಈ ಕಾಲರೂಪದಲ್ಲಿದೆ.

(ಎ) ವರ್ತಮಾನಕಾಲ (ಬಿ) ಭೂತಕಾಲ

(ಸಿ) ಭವಿಷ್ಯತ್‌ಕಾಲ (ಡಿ) ಅಪೂರ್ಣ ಭವಿಷ್ಯತ್‌ಕಾಲ

44. 'ಹೃದಯವು ಕಮಲದಂತೆ ಅರಳಿತು' — ಈ ವಾಕ್ಯದಲ್ಲಿರುವ ಉಪಮಾನ

(ಎ) ಹೃದಯ (ಬಿ) ಕಮಲ

(ಸಿ) ಅಂತೆ (ಡಿ) ಅರಳಿತು

45. 'ಕಚೇರಿ' — ಪದವು ಈ ಭಾಷೆಗೆ ಸೇರಿದೆ

(ಎ) ಸಂಸ್ಕೃತ (ಬಿ) ಹಿಂದೂಸ್ತಾನಿ

(ಸಿ) ಪೋರ್ಚುಗೀಸ್ (ಡಿ) ಇಂಗ್ಲಿಷ್

46. 'ಸಂಬಂಧದಲ್ಲಿ' — ಪದದಲ್ಲಿರುವ ವಿಭಕ್ತಿ ಪ್ರತ್ಯಯ

(ಎ) ಅನ್ನು (ಬಿ) ಇಂದ

(ಸಿ) ಅ (ಡಿ) ಅಲ್ಲಿ

47. 'ಕಪ್ಪಕಾಣಿಕೆ' — ಪದದ ವ್ಯಾಕರಣಾಂಶ

(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

(ಸಿ) ಜೋಡುನುಡಿ (ಡಿ) ನುಡಿಗಟ್ಟು

48. 'ಕೆರೆಕಟ್ಟೆ ಬಾವಿಗಳು' — ಪದವು ಈ ಸಮಾಸಕ್ಕೆ ಸೇರಿದೆ

(ಎ) ದ್ವಿಗು (ಬಿ) ದ್ವಂದ್ವ

(ಸಿ) ಕ್ರಿಯಾ (ಡಿ) ಗಮಕ

49. 'ಕುವೆಂಪುರವರ ಭಾವಗೀತೆಗಳನ್ನು ಕೇಳಿ ವಿದ್ಯಾರ್ಥಿಗಳು ಮೈಮರೆತರು' — ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ಅಲಂಕಾರಿಕ ವಾಕ್ಯ

50. ಸತ್ಯಕ್ಕಾಗಿ ಆಗ್ರಹಿಸುವುದೇ 'ಸತ್ಯಾಗ್ರಹ' ಎಂಬ ಅರ್ಥವನ್ನು ನೀಡುತ್ತದ — ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ವಾಕ್ಯವೇಷ್ಟನ

(ಸಿ) ವಿವರಣಾತ್ಮಕ (ಡಿ) ಆವರಣ

51. 'ಘನದೊಳ್' — ಈ ಪದಕ್ಕೆ ಪ್ರಸ್ತಾರ ಹಾಕಿದಾಗ ಹೀಗಾಗುತ್ತದೆ

(ಎ) U U — (ಬಿ) — —

(ಸಿ) — U U (ಡಿ) U — U

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಭಾಂವ್ರಿದೇವಿಯು ರಾಜಸ್ಥಾನದ ಒಂದು ಬಡ ಕುಟುಂಬದಲ್ಲಿ ಜನಿಸಿದಳು. ಇವಳು ಮನೆಗೆಲಸ ಮತ್ತು ಪ್ರತಿನಿತ್ಯ ಕತ್ತೆಗಳನ್ನು ಬಯಲಿನಲ್ಲಿ ಮೇಯಿಸುವ ಕೆಲಸವನ್ನು ಮಾಡಿಕೊಂಡಿದ್ದಳು. ಇವಳಿಗೆ ತಂದೆ–ತಾಯಿ ಚಿಕ್ಕ ವಯಸ್ಸಿನಲ್ಲಿ ಮೋಹನ್‌ಲಾಲ್ ಎಂಬ ಹುಡುಗನೊಂದಿಗೆ ವಿವಾಹವನ್ನು ಮಾಡಿದರು. ಇವಳು ಬಡತನದ ಕಷ್ಟ ಮತ್ತು ಚಿಕ್ಕ ವಯಸ್ಸಿನಲ್ಲೇ ತಾಯ್ತನದಿಂದಾಗುವ ಪರಿಣಾಮಗಳನ್ನರಿತಿದ್ದಳು. ಈಕೆ ತನ್ನ ಮಗಳಿಗೆ ಬಾಲ್ಯವಿವಾಹವನ್ನು ಮಾಡುವುದನ್ನು ವಿರೋಧಿಸಿದಳು. ಧೃತಿಗೆಡದ ಈಕೆ ಊರಿನ ಹೆಂಗಸರಿಗೆ ಇದರ ಸಾಧಕ–ಭಾದಕಗಳನ್ನು ಕುರಿತು ತಿಳಿಸಿ, ಅವರಲ್ಲಿ ಜಾಗೃತಿಯನ್ನು ಮೂಡಿಸಿದಳು. ಇವಳ

ಸಮಾಜಸೇವೆಗಾಗಿ 'ನೀರ್ಜಾಭನೋಟ್' ಪ್ರಶಸ್ತಿ ನೀಡಲಾಗಿದೆ. ಇದರಿಂದ ಬಂದ ಒಂದು ಲಕ್ಷ ರೂಪಾಯಿ ಮೊತ್ತದ ಹಣವನ್ನು ಹಳ್ಳಿಯಲಿರುವ ಹೆಣ್ಣು ಮಕ್ಕಳ ಶಾಲೆಗೆ ಶೌಚಾಲಯ ನಿರ್ಮಾಣ ಮಾಡಲು ನೀಡಿದಳು.

*ಪ್ರಶ್ನೆಗಳು :*

52. ಪ್ರತಿನಿತ್ಯ ಭಾಂವ್ರಿದೇವಿ ಮಾಡುತ್ತಿದ್ದ ಕೆಲಸಗಳೇನು ?
53. ಭಾಂವ್ರಿದೇವಿಯ ಅರಿವಿಗೆ ಬಂದ ವಿಚಾರಗಳೇನು ?
54. ಭಾಂವ್ರಿದೇವಿಗೆ ನೀಡಿದ ಪ್ರಶಸ್ತಿ ಯಾವುದು ?
55. ಭಾಂವ್ರಿದೇವಿಯು ತನಗೆ ಬಂದ ಪ್ರಶಸ್ತಿಯ ಹಣವನ್ನು ಯಾವ ಕಾರ್ಯಕ್ಕೆ ನೀಡಿದಳು ?

56. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ
* ಮಾಡಿದ್ದುಣ್ಣೋ ಮಹರಾಯ
* ಉಪ್ಪು ತಿಂದವನು ನೀರು ಕುಡಿಯಲೇಬೇಕು

57. ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವಿಕ್ರಮ್ / ಅಕ್ಷತಾ' ಎಂದು ಭಾವಿಸಿಕೊಂಡು, ಮೈಸೂರಿನಲ್ಲಿರುವ ನಿಮ್ಮ ತಾಯಿಯವರಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ 'ಮಕ್ಕಳ ದಿನಾಚರಣೆ ಕಾರ್ಯಕ್ರಮ'ವನ್ನು ಕುರಿತು ಪತ್ರವೊಂದನ್ನು ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು 'ಕಿರಣ್ / ಸನಿಶಾ' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಹಾಳಾಗಿರುವ ರಸ್ತೆಗಳ ಗುಂಡಿಗಳನ್ನು ಮುಚ್ಚುವಂತೆ ಕೋರಿ ನಗರಸಭಾ ಅಧ್ಯಕ್ಷರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

58. **ಈ ಕೆಳಗಿನ ಯಾವುದಾದರೂ ಒಂದು ವಿಷಯದ ಬಗ್ಗೆ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** $1 \times 4 = 4$

* ಅರಣ್ಯಗಳು ಮತ್ತು ಅವುಗಳಿಂದಾಗುವ ಉಪಯೋಗಗಳು
* ಸಂಪರ್ಕ ಮಾಧ್ಯಮಗಳು ಮತ್ತು ಅವುಗಳ ಪ್ರಯೋಜನಗಳು
* ಜ್ಞಾನ ಸಂಪಾದನೆಯಲ್ಲಿ ಗ್ರಂಥಾಲಯಗಳ ಪಾತ್ರ